JULY 29, 2025

# AKASHAVANI - DHARWAD
# PRADESH SAMACHARA (KANNADA) 7.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ರಾಜ್ಯಕ್ಕೆ ರಸಗೊಬ್ಬರ ಪೂರೈಸಲು, ರಾಜ್ಯ ಸಂಸದರ ನಿಯೋಗದಿಂದ, ಕೇಂದ್ರ ರಸಗೊಬ್ಬರ ಖಾತೆ ಸಚಿವರಿಗೆ, ಮನವಿ.**

**ಕೇಂದ್ರ ಪುರಸ್ಕೃತ, ಸಾಮಾಜಿಕ ಭದ್ರತಾ ಯೋಜನೆಗಳು; ರಾಜ್ಯದ ಫಲಾನುಭವಿಗಳ ಒಳಗೊಳ್ಳುವಿಕೆಗೆ, ಜನ ಜಾಗ್ರತಿ.**

**ಇಂದು, ಅಂತಾರಾಷ್ಟ್ರೀಯ ಹುಲಿ ದಿನಾಚರಣೆ; 'ಹುಲಿಗಾಗಿ ಧ್ವನಿ ಎತ್ತೋಣ', ಧ್ಯೇಯ**

**ನಾಡಿನಾದ್ಯಂತ, ಇಂದು, ನಾಗರ ಪಂಚಮಿ ಹಬ್ಬದ ಸಂಭ್ರಮ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದಲ್ಲಿ ರಸಗೊಬ್ಬರದ ಬೇಡಿಕೆ ಹೆಚ್ಚಿದ್ದು, ಅಗತ್ಯ ರಸಗೊಬ್ಬರಗಳನ್ನು ಕರ್ನಾಟಕಕ್ಕೆ ಸರಬರಾಜು ಮಾಡುವಂತೆ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ, ಜೆ.ಪಿ ನಡ್ಡಾ ಅವರಿಗೆ ಮನವಿ ಮಾಡಿದ್ದಾಗಿ, ಬೆಳಗಾವಿ ಸಂಸದ ಜಗದೀಶ ಶೆಟ್ಟರ ತಿಳಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಸೇರಿದಂತೆ, ಬಿಜೆಪಿ ಸಂಸದರ ನಿಯೋಗದ ಮನವಿಗೆ, ಸಚಿವ ಜೆ.ಪಿ ನಡ್ಡಾ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಗತ್ಯ ರಸಗೊಬ್ಬರ ಪೂರೈಸುವ ಭರವಸೆ ನೀಡಿದ್ದಾರೆ. ಕೇಂದ್ರ ಸರ್ಕಾರ 1 ಲಕ್ಷದ 65 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ರಾಜ್ಯಕ್ಕೆ ಒದಗಿಸಿದ್ದು, ಸಂಗ್ರಹಿಸಲಾಗಿದೆ ಎಂದು, ಹೊಸ ದಿಲ್ಲಿಯಲ್ಲಿ ಮಾಹಿತಿ ನೀಡಿದ್ದಾರೆ.**

<><><>

**ಕರ್ನಾಟಕ ರೈತ ಸುರಕ್ಷಾ, ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆ ಅಡಿ, ಬಳ್ಳಾರಿ ಜಿಲ್ಲೆಯಲ್ಲಿ, ಒಟ್ಟು 5 ಸಾವಿರದ 401 ರೈತರ ಖಾತೆಗಳಿಗೆ, 9 ಕೋಟಿ 12 ಲಕ್ಷ ರೂಪಾಯಿ, ಬೆಳೆ ವಿಮೆ ಪರಿಹಾರ ಪಾವತಿಸಲಾಗಿದೆ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕ, ಕೆ. ಸೋಮಶೇಖರ ಮಾಹಿತಿ ನೀಡಿದ್ದಾರೆ.**

<><><>

ಸೂರ್ಯಕಾಂತಿ, ತೊಗರಿ, ಹತ್ತಿ, ಈರುಳ್ಳಿ ಬೆಳೆಗಳ ವಿಮೆ ನೋಂದಣಿಗೆ, ಈ ತಿಂಗಳ 31 ಕೊನೆ ದಿನವಾಗಿದೆ. ನವಣೆ, ಶೇಂಗಾ, ಭತ್ತ, ರಾಗಿ ಹಾಗೂ ಹುರುಳಿ ಬೆಳೆಗಳ ವಿಮೆ ನೋಂದಣಿಗೆ, ಆಗಸ್ಟ್ 16 ಅಂತಿಮ ದಿನಾಂಕ ಎಂದು, ಕೃಷಿ ಇಲಾಖೆ ತಿಳಿಸಿದೆ.

<><><>

ಪ್ರಧಾನಮಂತ್ರಿ ಜನ ಸುರಕ್ಷಾ ವಿಮೆ ಯೋಜನೆ, ಅಟಲ್ ಪಿಂಚಣಿ ಯೋಜನೆ ಸೇರಿದಂತೆ, ಅರ್ಹ ಫಲಾನುಭವಿಗಳ, ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ಒಳಗೊಳ್ಳುವಿಕೆಯನ್ನು ಖಾತ್ರಿ ಪಡಿಸಿ, ಪೂರ್ಣತೆ ಸಾಧಿಸಲು, ಜನ ಜಾಗ್ರತಿ ಕಾರ್ಯಕ್ರಮ, ಕೋಲಾರ ಜಿಲ್ಲೆಯಲ್ಲಿ ಆಯೋಜಿತವಾಗಿದೆ. ಇತರಸನ ಗ್ರಾಮದಲ್ಲಿ, ಓರಿಯಂಟಲ್ ಕ್ರಾಪ್ ಇನ್ಸೂರೆನ್ಸ್ ಕಂಪೆನಿಯ, ಜಿಲ್ಲಾ ಸಂಯೋಜಕ, ಸುಬ್ರಹ್ಮಣ್ಯ, ವಿಮೆ ಯೋಜನೆ ಬಗ್ಗೆ ಮಾಹಿತಿ ನೀಡಿದರು.

<><><>

ಧ್ವನಿ: ಸುಬ್ರಹ್ಮಣ್ಯ 34 ಸೆಕೆಂದುಗಳು

<><><>

ಬಾಗಲಕೋಟೆಯಲ್ಲಿ, 2ನೇ ಆವೃತ್ತಿಯ ಪ್ರಧಾನಮಂತ್ರಿ ಆವಾಸ ಯೋಜನೆ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳ ಮಾಹಿತಿ ಹಾಗೂ ನೋಂದಣಿ ಶಿಬಿರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ ನೀಡಿದರು.

<><><>

ರಾಜ್ಯಾದ್ಯಂತ ವಿತರಿಸಲಾದ, 56 ಲಕ್ಷ ಕಾರ್ಮಿಕ ಗುರುತಿನ ಚೀಟಿಗಳಲ್ಲಿ, 20 ಲಕ್ಷ ಚೀಟಿಗಳು ಅನಧಿಕೃತವಾಗಿದ್ದು, ಅವುಗಳನ್ನು ನಿಷೇಧಿಸಲಾಗಿದೆ, ಎಂದು ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಈ ವಿಷಯ ತಿಳಿಸಿದ ಸಚಿವರು, ಕಾರ್ಮಿಕರ ಸ್ಮಾರ್ಟ್ ಕಾರ್ಡ್‌ಗಳಿಗೆ ಅರ್ಜಿ ಸಲ್ಲಿಸಿದವರ, ವಿವರಗಳನ್ನು ಅಂಬೇಡ್ಕರ ಸೇವಾ ಕೇಂದ್ರಗಳ ಮೂಲಕ ಪರಿಶೀಲಿಸಿ, 36 ಲಕ್ಷ ಕಾರ್ಡ್‌ಗಳನ್ನು ಮಾತ್ರ ಮಾನ್ಯ ಮಾಡಲಾಗಿದೆ ಎಂದರು. ಉತ್ತರಕನ್ನಡ ಜಿಲ್ಲೆ, ಕಾರವಾರಕ್ಕೆ ಇಂದು ಸಚಿವರು, ಭೇಟಿ ನೀಡಲಿದ್ದಾರೆ. ಜಿಲ್ಲೆಯ ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಿದ್ದಾರೆ.

<><><>

ಬಾಗಲಕೋಟೆ ಜಿಲ್ಲೆಯಲ್ಲಿ, ಪಂಚ ಖಾತ್ರಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಅಧಿಕಾರಿಗಳು ಸಮನ್ವಯತೆಯಿಂದ, ಕಾರ್ಯ ನಿರ್ವಹಿಸಲು, ಜಿಲ್ಲಾ ಪಂಚಾಯಿತಿ ಸಿಇಓ. ಶಶಿಧರ ಕುರೇರ, ತಾಲೂಕು ಹಾಗೂ ಗ್ರಾಮೀಣ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಖಾತ್ರಿ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲಿಸಿ, ಮಾತನಾಡಿದರು.

<><><>

ಯುವನಿಧಿ ಯೋಜನೆ, ಉದ್ಯೋಗಾಕಾಂಕ್ಷಿ ಯುವಜನರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿದೆ ಎಂದು, ಖಾತ್ರಿ ಯೋಜನೆ ಅನುಷ್ಠಾನ ಸಮಿತಿ, ಉಡುಪಿ ಜಿಲ್ಲಾಧ್ಯಕ್ಷ ಅಶೋಕ ಕುಮಾರ ಕೊಡವೂರು ಹೇಳಿದ್ದಾರೆ. ನಗರದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ, ಯುವನಿಧಿ

ನೋಂದಣಿ ಅಭಿಯಾನದಲ್ಲಿ ಅವರು ಮಾತನಾಡಿದರು. ಅರ್ಹ ಫಲಾನುಭವಿಗಳು, ಪ್ರತಿ ಮೂರು ತಿಂಗಳಿಗೊಮ್ಮೆ, ಆನ್ಲೈನ್ ನಲ್ಲಿ ಸ್ವಯಂ ಘೋಷಣೆ ಸಲ್ಲಿಸುವುದು ಕಡ್ಡಾಯ ಎಂದರು.

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಇಂದು, ಅಂತಾರಾಷ್ಟ್ರೀಯ ಹುಲಿ ದಿನ. 'ಹುಲಿಗಳಿಗಾಗಿ ಧ್ವನಿ ಎತ್ತೋಣ' – ಹುಲಿಗಳು, ಅರಣ್ಯ ಹಾಗೂ ಜೀವಗಳನ್ನು ರಕ್ಷಿಸೋಣ' ಎಂಬ ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ. ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹೊಳೆಮತ್ತಿ ನೇಚರ್ ಕಾನ್ಸರ್ವೇಶನ್ ಫೌಂಡೇಶನ್ ಸಂಸ್ಥಾಪಕ ಕಾರ್ಯಾಧ್ಯಕ್ಷ ಹಾಗೂ ವನ್ಯಜೀವಿ ತಜ್ಞ, ಬೆಂಗಳೂರಿನ ಸಂಜಯ ಗುಬ್ಬಿ.

<><><>

ಧ್ವನಿ: ಸಂಜಯ ಗುಬ್ಬಿ 66 ಸೆಕೆಂದುಗಳು

<><><>

ಇಂದು, ನಾಗರ ಪಂಚಮಿ. ಶ್ರಾವಣ ಮಾಸದ ವಿಶಿಷ್ಟ ಹಬ್ಬವನ್ನು, ವಿಶೇಷವಾಗಿ ಹೆಣ್ಣು ಮಕ್ಕಳು, ಸಡಗರ, ಸಂಭ್ರಮದಿಂದ ಹಲವೆಡೆ ನಿನ್ನೆ ಹಾಗೂ ಕೆಲವೆಡೆ ಇಂದು ಆಚರಿಸುತ್ತಿದ್ದಾರೆ. ರಾಜ್ಯದ ಪ್ರಸಿದ್ಧ ನಾಗಾರಾಧನೆಯ ದೇಗುಲಗಳು, ನಾಗಬನಗಳಲ್ಲಿ, ವಿಶೇಷ ಅಲಂಕಾರ, ಪೂಜೆ ಕೈಗೊಳ್ಳಲಾಗಿದೆ. ಮನೆಗಳಲ್ಲಿ ಮೃತ್ತಿಕೆಯ ನಾಗರ ಮೂರ್ತಿಗೆ, ದೇಗುಲಗಳಲ್ಲಿ ನಾಗ ಶಿಲ್ಪಗಳಿಗೆ ಹಾಲೆರೆದು, ಶ್ರದ್ಧಾ ಭಕ್ತಿಯಿಂದ ಪೂಜಿಸಲಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ನಾಗರ ಪಂಚಮಿ ಆಚರಣೆ ವಿಶೇಷವಾಗಿದ್ದು, ಬಗೆಬಗೆಯ ಪಲ್ಯ, ಉಸುಳಿ, ಶೇಂಗಾ–ಗುರೆಳ್ಳು ಚಟ್ನಿ, ಎಳ್ಳಿನ ಸಜ್ಜೆ ರೊಟ್ಟಿ ತಯಾರಿಸಿ, ಪರಸ್ಪರ ಹಂಚಲಾಗುತ್ತದೆ.

<><><>

ಪ್ರಕೃತಿ ಹಾಗೂ ಪರಿಸರ ಸಮತೋಲನ ಕಾಪಾಡಲು, ರಾಜ್ಯಾದ್ಯಂತ 11 ಕೋಟಿ 50 ಲಕ್ಷ ಸಸಿಗಳನ್ನು ನೆಟ್ಟು, ಬೆಳೆಸುವ ಗುರಿ ರಾಜ್ಯ ಅರಣ್ಯ ಇಲಾಖೆ ಹೊಂದಿದೆ ಎಂದು, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಯಾದಗಿರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ವನಮಹೋತ್ಸವಕ್ಕೆ ಚಾಲನೆ ನೀಡಿ, ಯಾದಗಿರಿ ಜಿಲ್ಲೆಯಲ್ಲಿ, 4 ಲಕ್ಷ ಸಸಿಗಳನ್ನು ನೆಟ್ಟು, ಹಸಿರು ಆವರಣ ಹೆಚ್ಚಿಸಲು ಕ್ರಮವಹಿಸಲಾಗುವುದು ಎಂದರು.

<><><>

ಆಗಸ್ಟ್ 4 ರಿಂದ 6ರ ವರೆಗೆ, ಅಮೆರಿಕದ ಬೋಸ್ಟನ್ ನಲ್ಲಿ, ಶಾಸಕಾಂಗ ಶೃಂಗಸಭೆ ಆಯೋಜಿತವಾಗಿದೆ. ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ, ಶಾಸಕರು ಹಾಗೂ ರಾಜ್ಯದ ಸಂಸದರು, ಮೂರು ದಿನಗಳ ಈ ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಭಾಪ್ರಭುತ್ವದ ಸುದೃಢತೆಯಲ್ಲಿ ಶಾಸಕಾಂಗದ ಪಾತ್ರ, ಶಾಸನ ಸಭೆಗಳ ಆರ್ಥಿಕ ಸ್ವಾಯತ್ತತೆ ಕುರಿತು ವಿಚಾರ ಸಂಕಿರಣ ಹಾಗೂ ಸಂವಾದ ನಡೆಯಲಿದೆ.

<><><>

ರಾಯಚೂರು ನಗರದ, ಖಾಸಗಿ ಆಸ್ತಿಗಳ ಇ-ಖಾತೆ ಸಮಸ್ಯೆ ಕಾಲಮಿತಿಯಲ್ಲಿ ಪರಿಹರಿಸುವಂತೆ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ, ಕಂದಾಯ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಬೆಂಗಳೂರು ವಿಕಾಸಸೌಧದಲ್ಲಿ, ವಿಜ್ಞಾನ ಹಾಗೂ ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್ ಬೋಸರಾಜು ಅವರು, ಸಚಿವರೊಂದಿಗೆ ಇ-ಖಾತೆ ಸಮಸ್ಯೆ ಪರಿಹಾರದ ಕುರಿತು, ಸಮಾಲೋಚಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಜ್ಯಕ್ಕೆ ರಸಗೊಬ್ಬರ ಪೂರೈಸಲು, ರಾಜ್ಯ ಸಂಸದರ ನಿಯೋಗದಿಂದ, ಕೇಂದ್ರ ರಸಗೊಬ್ಬರ ಖಾತೆ ಸಚಿವರಿಗೆ, ಮನವಿ.

ಕೇಂದ್ರ ಪುರಸ್ಕೃತ, ಸಾಮಾಜಿಕ ಭದ್ರತಾ ಯೋಜನೆಗಳು; ರಾಜ್ಯದ ಫಲಾನುಭವಿಗಳ ಒಳಗೊಳ್ಳುವಿಕೆಗೆ, ಜನ ಜಾಗ್ರತಿ.

ಇಂದು, ಅಂತಾರಾಷ್ಟ್ರೀಯ ಹುಲಿ ದಿನಾಚರಣೆ; 'ಹುಲಿಗಾಗಿ ಧ್ವನಿ ಎತ್ತೋಣ', ಧ್ಯೇಯ

ನಾಡಿನಾದ್ಯಂತ, ಇಂದು, ನಾಗರ ಪಂಚಮಿ ಹಬ್ಬದ ಸಂಭ್ರಮ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>